ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 4/2021

(ಫ್ರಾಸಾ-3 ಚಾಸಾ-2)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 27.02.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರೇಮ |
| ಗಂಡನ ಹೆಸರು | - | ಬಲರಾಮ |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಗಂಗವಾರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಫ್ರಾಸಾ-1 ಮತ್ತು ಫ್ರಾಸಾ-2, ಚಾಸಾ-4 ರಿಂದ 7 ಗೊತ್ತು. ನಾನು ಮತ್ತು ಫ್ರಾಸಾ-3 ಪರಿಶಿಷ್ಟ ಜಾತಿಗೆ ಸೇರಿದವರು. ಫ್ರಾಸಾ-1 ಪರಿಶಿಷ್ಟ ಜಾತಿಯ ಬೋವಿ ಜಾತಿಗೆ ಸೇರಿದವರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಆರೋಪಿ ಒಕ್ಕಲಿಗ ಜನಾಂಗಕ್ಕೆ ಸೇರಿದವರು.

2. ಈಗ ಸುಮಾರು ಮೂರು ವರ್ಷಗಳ ಹಿಂದೆ ಮಧ್ಯಾಹ್ನ 03.30 ಕ್ಕೆ ನಾನು ಮತ್ತು ಫ್ರಾಸಾ-1 ಆರೋಪಿಯ ತೋಟದಲ್ಲಿದ್ದೆವು, ಫ್ರಾಸಾ-2 ಭಾಗ್ಯಮ್ಮ ಪಕ್ಕದ ತೋಟದಲ್ಲಿದ್ದರು. ಆರೋಪಿ ತಮ್ಮ ಮನೆಯಲ್ಲಿದ್ದರು, ಅವರ ಮಗ ಫೋನ್ ಮಾಡಿ ಆರೋಪಿಯನ್ನು ತೋಟಕ್ಕೆ ಕರೆಸಿದರು. ಆರೋಪಿ ಫ್ರಾಸಾ-1 ಇವರಿಗೆ, ನಿಮ್ಮಮ್ಮನಾ ಮಾದಿಕಾಕೇಯಾ, ಕೀಳು ಜಾತಿಯವರು ಎಂದು ಬೈದು ದೊಣ್ಣೆಯಿಂದ ಫ್ರಾಸಾ-1 ರವರ ಕೈಗೆ, ಮುಖಕ್ಕೆ ಕಾಲಿಗೆ ಹೊಡೆಯುತ್ತಿದ್ದರು. ನಾನು ಬಿಡಿಸಲು ಹೋದಾಗ ಆರೋಪಿ ನನಗೂ ಸಹ ಮಾದಿಕಾನಾಕೇಯೂ ಕೀಳು ಜಾತಿಯವಳು ಎಂದು ಬೈದು ಸೀರೆ ಹಿಡಿದು ಎಳೆದಾಡಿ ಕೋಲಿನಲ್ಲಿ ಹೊಡೆದರು. ನನ್ನ ಕೈಗೆ ಮತ್ತು ಕಾಲಿಗೆ ಏಟಾಗಿ ರಕ್ತ ಬಂದಿತ್ತು.

3. ನಂತರ ನಾನು ಮತ್ತು ಫ್ರಾಸಾ-1 ನಮ್ಮ ಮನೆಗೆ ಹೋದೆವು. ಆ ದಿನ ಸುಸ್ತಾಗಿದ್ದು ಸಂಜೆ ಆಗಿದ್ದರಿಂದ ಮರುದಿನ ಬೆಳಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಗಲಾಟೆ ವಿಚಾರಕ್ಕೆ ನಾವು ಚನ್ನರಾಯಪಟ್ಟಣ ಪೋಲಿಸ್ ಠಾಣೆಗೆ ಹೋಗಿ ವಿಚಾರ ತಿಳಿಸಿ ದೂರು ನೀಡಿದೆವು. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದರು. ಸಾಕ್ಷಿ ನ್ಯಾಯಾಲಯದಲ್ಲಿರುವ ಎರಡು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಒಂದು ದೊಣ್ಣೆ ಈಗಾಗಲೇ ಮು.ಮಾ-1 ಮತ್ತು 2  ಎಂದು ಗುರುತಾಗಿರುತ್ತವೆ.

**<u>ಪಾಟೀ ಸವಾಲುಃ  ಆರೋಪಿತರ ಪರ ಶ್ರೀ ಪಿಡಿ ವಕೀಲರಿಂದಃ</u>**

(ಈ ಹಂತದಲ್ಲಿ ಬೆಳಗಿನ ಕಾಲಾವಧಿ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**<u>ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ  ಆರೋಪಿತರ ಪರ ಶ್ರೀ ಪಿಡಿ ವಕೀಲರಿಂದಃ</u>**

4. ಫ್ರಾಸಾ-1 ನನ್ನ ಮೈದುನನ ಹೆಂಡತಿ. ಫ್ರಾಸಾ-1 ಹಾಗೂ ನಾನು ಘಟನೆ ಸಮಯದಲ್ಲಿ ಒಂದೇ ತೋಟದಲ್ಲಿ ದೂರ ದೂರ ಇದ್ದೆವು. ಫ್ರಾಸಾ-1 ಕಿರುಚಾಡುವುದನ್ನು ಕೇಳಿ ನಾನು ಅವಳ ಬಳಿ ಹೋದೆನು. ಫ್ರಾಸಾ-1 ಕಿರುಚಾಡಿವಾಗ

ನಾನು, ಪ್ರಾಸಾ-1, ಆರೋಪಿ ಹಾಗೂ ಆರೋಪಿಯ ಮಗ ಸ್ಥಳದಲ್ಲಿ ಇದ್ದೆವು. ಘಟನೆಯ ನಂತರ ನಾನು ಹಾಗೂ ಪ್ರಾಸಾ-1 ಮನೆಗೆ ಹೋದೆವು, ರಾತ್ರಿಯಾಗಿದ್ದರಿಂದ ಆಸ್ಪತ್ರೆಗೆ ಮರುದಿನ ಹೋದೆವು. ಘಟನಾ ಸ್ಥಳವು ನಮ್ಮ ಮನೆಯಿಂದ ಅರ್ಧ ಕಿಮೀ ದೂರದಲ್ಲಿರುತ್ತದೆ. ನಾನು, ಪ್ರಾಸಾ-1 ಮತ್ತು ಪ್ರಾಸಾ-2 ಒಟ್ಟಿಗೆ ಆಸ್ಪತ್ರೆಗೆ ಹೋದೆವು.

5. ಘಟನೆಯ ಸಮಯದಲ್ಲಿ ಪ್ರಾಸಾ-2 ಭಾಗ್ಯಮ್ಮ ಇನ್ನೊಂದು ತೋಟದಲ್ಲಿ ಇದ್ದಳು. ಪ್ರಾಸಾ-2 ಇದ್ದ ತೋಟ ಯಾರದ್ದು ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಭಾಗ್ಯಮ್ಮ ಇದ್ದ ತೋಟದ ಬಳಿ ಹೋಗಿರುವುದಿಲ್ಲ. ನಾನು ಮತ್ತು ಪ್ರಾಸಾ-1 ಘಟನೆಯ ಬಳಿಕ ಮನೆಗೆ ಹಿಂತಿರುಗುತ್ತಿದ್ದಾಗ ಪ್ರಾಸಾ-2 ಭಾಗ್ಯಮ್ಮ ಇವರು ಸಹ ನನ್ನ ಜೊತೆಗೆ ಬಂದು ತನಗೆ ಆದ ಘಟನೆಯ ಬಗ್ಗೆ ನಮಗೆ ಹೇಳಿದ್ದರಿಂದ ಅವಳಿಗಾದ ಘಟನೆಯ ಬಗ್ಗೆ ನಮಗೆ ಗೊತ್ತಾಯಿತು. ನಾವು ಇದ್ದಂತಹ ತೋಟದ ಪಕ್ಕದ ತೋಟದಲ್ಲಿ ಪ್ರಾಸಾ-2 ರವರು ಇದ್ದರು.

6. ಆಸ್ಪತ್ರೆಗೆ ಹೋಗುವುದಕ್ಕಿಂತ ಮೊದಲು ಘಟನೆಯ ಬಗ್ಗೆ ನಾನು ಬೇರೆ ಯಾರಿಗೂ ಸಹ ತಿಳಿಸಿಲ್ಲ. ನಾನು ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ರಾಜಣ್ಣ ಇವರು ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ತಿಳಿಸಿದ್ದೇನೆ. ಪೋಲಿಸ್ ಠಾಣೆಯಲ್ಲಿ ದೂರು ನೀಡಲು ವೈದ್ಯರು ನನಗೆ ಸೂಚಿಸಲಿಲ್ಲ. ದೂರು ನೀಡಲು ಯಾರು ಸೂಚಿಸಲಿಲ್ಲ. ಆಸ್ಪತ್ರೆಗೆ ಹೋದ ನಂತರ ನಾವು ಮೂವರು ಠಾಣೆಗೆ ಹೋದೆವು. ದೂರನ್ನು ನಾವು ಹೇಳಿದಂತೆ ಪೋಲಿಸರು ಬರೆದುಕೊಂಡರು. ನಿಪಿ-1 ದೂರಿನಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತು. ಬಾಲೇಪುರದ ರಾಜಣ್ಣ ಇವರ ತೋಟದಲ್ಲಿ ಸೊಪ್ಪು ಕುಯ್ಯಲು ಹೋಗಿದ್ದೆವು ಎಂದು ದೂರಿನಲ್ಲಿ ನಾನೇ ಬರೆಸಿದ್ದೇನೆ. ನಿಪಿ-1 ದೂರಿಗೆ ಪ್ರಾಸಾ-2 ಸಹಿ ಹಾಕಿಲ್ಲ.

7. ನನ್ನ ಮೇಲೆ ಗಲಾಟೆ ಮಾಡಿದ ಜಾಗದಲ್ಲಿ ಎರಡು ದೊಣ್ಣೆಗಳು ಇದ್ದವು. ನಾವು ದೂರು ನೀಡಿದ ನಂತರ ಪೋಲಿಸರು ನನ್ನನ್ನು ಠಾಣೆಗೆ ಯಾವತ್ತೂ ಕರೆಸಿರುವುದಿಲ್ಲ ಹಾಗೂ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ. ನಮಗೆ ಆರೋಪಿ ಹೊಡೆದಿದ್ದ ಜಾಗದಲ್ಲಿ

ಪೋಲಿಸರು ದೊಣ್ಣೆಗಳನ್ನು ಅವರೇ ತೆಗೆದುಕೊಂಡರು. ಮು.ಮಾ-1 ಮತ್ತು 2 ರಂತಹ ದೊಣ್ಣೆಗಳು ಊರಿನ ಜಮೀನಿನಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ಸರಿ.

8. ನಾನು ಖಾಸಗಿ ಶಾಲೆಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತೇನೆ. ನನಗೆ ಬಾಲೇಪುರದ ರಾಜಣ್ಣ ಗೊತ್ತು. ಶಾಲೆಯ ರಜಾ ದಿನಗಳಲ್ಲಿ ನಾನು ಬಾಲೇಪುರದ ರಾಜಣ್ಣರವರ ತೋಟಕ್ಕೆ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ಯಾರ ಬಳಿಯೂ ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಫ್ರಾಸಾ1 ಇವರು ಸಹ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಘಟನೆಯ ನಂತರ ನಾನು ಬಾಲೇಪುರದ ರಾಜಣ್ಣರವರ ಮನೆಗೆ ಹೋಗಿರುವುದಿಲ್ಲ.

9. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣದಿಂದ ಅದೇ ದಿನ ಕತ್ತಲೆಯಾಗಿದ್ದರಿಂದ ಆಸ್ಪತ್ರೆಗಾಗಿ ಹೋಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಕಾರಣದಿಂದ ನಾನು ತಕ್ಷಣವೇ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಭಾಗ್ಯಮ್ಮಳು ಸಹ ದೂರು ಕೊಡಲು ನಮ್ಮ ಜೊತೆ ಬಂದಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಬಾಲೇಪುರದ ರಾಜಣ್ಣ ಹಾಗೂ ಆರೋಪಿಗೂ ನಡುವೆ ಆಸ್ತಿ ವಿವಾದ ಇದ್ದುದ್ದರಿಂದ ಅವರಿಬ್ಬರ ವೈಮನಸ್ಸಿನಿಂದ ಬಾಲೇಪುರದ ರಾಜಣ್ಣ ಇವರು ನಮ್ಮ ಮೂಲಕ ಈ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ನನ್ನ ವಿರುದ್ಧ ಯಾವುದೇ ಕೃತ್ಯಗಳನ್ನು ಎಸಗದೇ ಇದ್ದರೂ ಸಹ ನಾವು ಮತ್ತು ಬಾಲೇಪುರದ ರಾಜಣ್ಣ ಷಾಮೀಲಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ ನಂತರ ನಮಗೆ ಸರ್ಕಾರದಿಂದ ಪರಿಹಾರ ಹಣ ಬಂದಿರುತ್ತದೆ ಎಂದರೆ ಸರಿ. ಸರ್ಕಾರದಿಂದ ಪರಿಹಾರದ ಹಣ ಬರುತ್ತದೆ ಎಂದು ಬಾಲೇಪುರದ ರಾಜಣ್ಣ ಇವರು ನಮ್ಮ ಮೂಲಕ

ಸುಳ್ಳು ದೂರನ್ನು ಕೊಡಿಸಿ ಪರಿಹಾರವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು